

ಮೈಸೂರು ಅರಮನೆ ಗತವೈಭವದ ಕುರುಹಷ್ಟೇ ಅಲ್ಲ, ಮೈಸೂರಿನ ಸಾಂಸ್ಕೃತಿಕ ಸಂಪತ್ತಿನ ಗುರುತೂ ಹೌದು

## ಪರಂಪರೆ ಷೋ ಕೇಸ್ ಮಾಡಬೇಕಿದೆ...


ಮೈಸೂರು ಮಸಾಲೆ ದೋಸೆಯನ್ನು ತಳ್ಳಿ ಪಿಜ್ಜಾ ತಿನ್ನಲು ಸಾಧ್ಯವೇ? ಮೈಸೂರು ಮಲ್ಲಿಗೆಗೆ ಇರುವ ಘಮಕ್ಕೆ ಸರಿಸಾಟಿಯಾಗಬಲ್ಲ ತಾಕತ್ತು ಯಾವ ದೇಶದ ಸುಗಂಧ ದ್ರವ್ಯಕ್ಕಿದೆ?

ನಾನು ಸಂಗೀತ ಕಛೇರಿ ನೀಡಲು 40 ದೇಶಗಳಲ್ಲಿ ತಿರುಗಾಡಿದ್ದೇನೆ. ಆದರೆ, ಮೈಸೂರಿಗಿಂತ ಚೆಂದದ ನಗರವಿಲ್ಲ ಎನಿಸುತ್ತದೆ. ಮೈಸೂರು ಅರಮನೆಗಿಂತ ಮತ್ತೊಂದು ಕಟ್ಟಡ ಸೊಗಸಾಗಿಲ್ಲ ಎಂದೆನಿಸುತ್ತದೆ. ಸಂಗೀತದಲ್ಲಿ ಹೆಸರು ಮಾಡಿದವರು ಮದ್ರಾಸ್, ಬಾಂಬೆಯಲ್ಲಿ ನೆಲೆಸಿಬಿಡುತ್ತಿದ್ದರು. ಆದರೆ, ನನಗಾಗಲಿ, ನನ್ನ ತಂದೆಗಾಗಲಿ ಅಂಥ ಯೋಚನೆಯೇ ಬರಲಿಲ್ಲ. ನನ್ನ ಹೆಸರ ಹಿಂದೆಯೇ ಮೈಸೂರು ಇದೆ. ಮೈಸೂರಲ್ಲಿ ಪ್ರೀತಿ ಇದೆ, ಅಕ್ಕಪಕ್ಕದ ಮನೆಗಳ ನಡುವೆ ಸಂವಹನವಿದೆ.

ಈಚೆಗೆ ಸಂಪ್ರದಾಯ ಮರೆಯಾಗುತ್ತಿರುವ ನೋವು ಇದೆ. ಎತ್ತರದ ಕಟ್ಟಡವೊಂದು ಮೇಲೆದ್ದಾಗ, ಯಾವುದೋ ಫ್ಯಾಕ್ಟರಿ ಬಂದಾಗ ಮನಸ್ಸು, ಹೃದಯದಲ್ಲಿ ತಳಮಳ ಉಂಟಾಗುತ್ತದೆ. ದಸರೆಯಲ್ಲಿ ಅರಮನೆ ಮುಂದಿನ ವೇದಿಕೆಯಲ್ಲಿ ಸಂಗೀತದ ದಿಗ್ಗಜ ವಿದ್ವಾಂಸರ ಮುಂದೆ ಅನುಚಿತ ಪದ ಬಳಸಿರುವ ಚಿತ್ರಗೀತೆ ಹಾಡಲಾಗುತ್ತಿದೆ. ಯುವ ದಸರೆಯ ಹೆಸರಿನಲ್ಲಿ ವೇದಿಕೆಯಲ್ಲಿ ಸಿನಿಮಾ ಹಾಡುಗಳಿಗೆ ಅಶ್ಲೀಲವಾಗಿ ನೃತ್ಯ ಮಾಡಲಾಗುತ್ತಿದೆ. ಸಂಗೀತ, ಸಂಪ್ರದಾಯ, ರಾಜ ಪರಂಪರೆಗೆ ಧಕ್ಕೆ ಉಂಟು ಮಾಡುವ ಯಾವುದೇ ಬೆಳವಣಿಗೆಯನ್ನು ಮೂಲ ಮೈಸೂರಿಗರಿಗೆ ಸಹಿಸಿಕೊಳ್ಳಲು ಆಗಲ್ಲ. ಜನ ಸೇರಿಸಬೇಕೆಂಬುದೇ ಅಧಿಕಾರಿಗಳ ಉದ್ದೇಶವಾಗಿದ್ದರೆ ಕ್ಯಾಬರೆ ಡಾನ್ಸ್ ಇಡಲಿ. ಸಾರಾಯಿ ಹಂಚುವುದಾಗಿ ಘೋಷಣೆ ಮಾಡಿದರೆ ಕೋವಿಡ್ ಲಸಿಕೆ ಪಡೆಯುವ ಸ್ಥಳದಲ್ಲಿನ ಸರತಿ ಸಾಲಿಗಿಂತ ದೊಡ್ಡದಾಗುವುದಿಲ್ಲವೇ? ಪುಂಡ ಪೋಕರಿಗಳಿಗೆ ಮಾತ್ರ ಕಾರ್ಯಕ್ರಮ ಏರ್ಪಡಿಸಿ ಅವರನ್ನು ಖುಷಿಪಡಿಸುವುದಾದರೆ ಸಿನಿಮಾ ನಟರು ಸಾಕು. ದ.ರಾ. ಬೇಂದ್ರೆ, ರಾಘವಾಂಕ, ಪಂಪನ ಅಗತ್ಯವೇ ಇರುವುದಿಲ್ಲ.

ಭಾರತ ಯಾವುದರಲ್ಲಾದರೂ ದೊಡ್ಡಸ್ತಿಕೆ ತೋರಿಸಬಹುದೆಂದರೆ ಅದು ಪರಂಪರೆ ಹಾಗೂ ಸಂಪ್ರದಾಯ ಮಾತ್ರ. ಯೋಗ, ಸಂಗೀತಕ್ಕೆ ಸರಿಸಾಟಿ ಯಾವುದಿದೆ? ನಮ್ಮ ಅರಮನೆಗಿಂತ ಮತ್ತೊಂದು ಯಾವ ಕಟ್ಟಡ ಅದ್ಭುತವಾಗಿದೆ? ಒಂದು ಎತ್ತರದ ಕಟ್ಟಡ ತೋರಿಸಿದರೆ, ಅದಕ್ಕಿಂತ ಹತ್ತರಷ್ಟು ಎತ್ತರವಿರುವ ಕಟ್ಟಡ ಮತ್ತೊಂದು ದೇಶದಲ್ಲಿರುತ್ತದೆ. ಹೀಗಾಗಿ, ನಮ್ಮತನ, ನಮ್ಮ ಸಂಸ್ಕೃತಿ, ಪರಂಪರೆಯನ್ನು ಎತ್ತಿ ತೋರಿಸಬೇಕಿದೆ.

**-ಮೈಸೂರು ಮಂಜುನಾಥ್,** ವಯೊಲಿನ್ ಕಲಾವಿದ



ಬುಲೆಟ್ ಟ್ರೇನ್ ಆರಂಭಕ್ಕೆ ಸಮೀಕ್ಷೆ ನಡೆಯುತ್ತಿದೆ. ಐಟಿ, ಬಿಟಿ ಕಂಪನಿಗಳು, ಫ್ಯಾಕ್ಟರಿಗಳು ಬೆಂಗಳೂರು ಸಮೀಪದಲ್ಲೇ ಇರುವ ಮೈಸೂರಿನತ್ತಲೂ ಹೆಜ್ಜೆ ಇಡುತ್ತಿವೆ. ಈ ಹಿಂದೆಯೇ ಮೈಸೂರಲ್ಲಿ ಇನ್ಫೋಸಿಸ್‌ನ ಬೃಹತ್ ಕ್ಯಾಂಪಸ್ ತಲೆ ಎತ್ತಿ ನಿಂತಿದೆ. ಮೈಸೂರು ಬೆಳೆಯುತ್ತಿರುವ ವೇಗ ಗಮನಿಸಿ ನಿಯೊ ಮೆಟ್ರೊ ಆರಂಭಿಸುವ ಬಗ್ಗೆ ಸಮೀಕ್ಷೆ ನಡೆಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಮುಂದಾಗಿದೆ. ರಿಂಗ್ ರೋಡ್ ಸ್ಥಾಪನೆ ಬಳಿಕ ಮೈಸೂರು ವಿಸ್ತೀರ್ಣ ಹಿಗ್ಗುತ್ತಿದೆ. ಪ್ರಮುಖ ನಗರಗಳಿಗೆ ಇಲ್ಲಿಂದ ವಿಮಾನ ಸಂಪರ್ಕ ಹೆಚ್ಚುತ್ತಿದೆ.

ಹಾಗಾದರೆ ಅರಮನೆ ನಗರಿ ಮೈಸೂರು ಈಗ ಬದಲಾಗುತ್ತಿದೆಯೇ? ಕಾಲ ಬದಲಾದರೂ ಮೈಸೂರು ಬದಲಾಗಲ್ಲ ಎಂಬ ಮಾತು ಸುಳ್ಳಾಗುತ್ತಿದೆಯೇ? ಚಾಮುಂಡಿಬೆಟ್ಟದ ಸೊಬಗು ಅಳಿಸಿ ಹೋಯಿತೇ? ಕುಕ್ಕರಹಳ್ಳಿ ಕೆರೆ ದಡದಲ್ಲಿ ನಿಂತು ಮೌನಿಸುವ ಮಜಾ ಮರೆಯಾಯಿತೇ? ಮೈಲಾರಿ ಹೋಟೆಲ್ ದೋಸೆಯ ಘಮಲು ಹೊರಬರುತ್ತಿಲ್ಲವೇ?

ಮೈಸೂರು ಪೇಟ, ಮೈಸೂರು ರೇಷ್ಮೆ, ಮೈಸೂರು ಮಸಾಲಾ ದೋಸೆ, ಮೈಸೂರು ಗಂಧದ ಕಡ್ಡಿ, ಮೈಸೂರು ಪಾಕ್, ಮೈಸೂರು ಶ್ರೀಗಂಧದ ಎಣ್ಣೆ, ಮೈಸೂರು ವೀಳ್ಯದೆಲೆ, ಮೈಸೂರು ಮಲ್ಲಿಗೆ, ಮೈಸೂರು ಸಾಂಪ್ರದಾಯಿಕ ವರ್ಣಚಿತ್ರ, ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ಬೀಟೆಮರದ ಕೆತ್ತನೆ, ನಂಜನಗೂಡು ರಸಬಾಳೆ... ಆ ಸೊಬಗು ಮರೆಯಾಯಿತೇ? ಇಲ್ಲವೇ ಮಾಸಿತೇ? ಇಂಥ ಹತ್ತಾರ ಪ್ರಶ್ನೆಗಳು ಇಲ್ಲಿನ ನಾಗರಿಕರಲ್ಲಿ ಉದ್ಭವಿಸುವುದು ಸಹಜ.

ಕಾಸ್ಮೋಪಾಲಿಟನ್ ನಗರಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದವರು ರಿಟೈರ್ ಆಗುತ್ತಿದ್ದಂತೆ ಬಂದು ಮೈಸೂರಿನಲ್ಲಿ ಸೆಟ್ಲ್ ಆಗಿಬಿಡುತ್ತಿದ್ದರು. ಅಂಥವರ ದೊಡ್ಡ ಸಂಖ್ಯೆಯೇ ಇದೆ. ಅದಕ್ಕಾಗಿಯೇ 'ನಿವೃತ್ತರ ಸ್ವರ್ಗ' ಎಂದು ಈ ನಗರಿಯನ್ನು ಕರೆಯುವುದುಂಟು. ಜೊತೆಗೆ ರಾತ್ರಿ 10 ಗಂಟೆಯೊಳಗೆ ಮಲಗುವ ಮೈಸೂರು ಕಣ್ಬಿಡಲು ಬೆಳಿಗ್ಗೆ 10 ಗಂಟೆಯೇ ಆಗಬೇಕು ಎಂಬ ವಾತಾವರಣವೂ ಇದೆ!

ಅಷ್ಟೇ ಏಕೆ; ಶಿಕ್ಷಣ, ಉದ್ಯೋಗ ಅರಸಿ ಬಂದವರು ಇಲ್ಲೇ ನೆಲೆ ನಿಂತಿದ್ದಾರೆ. ಅವರಲ್ಲಿ ಶ್ರೇಷ್ಠ ಸಾಹಿತಿಗಳು, ಕಲಾವಿದರು ಇದ್ದಾರೆ. ಈ ನಗರಿಯ ಕಟ್ಟಿಕೊಟ್ಟ ಜೀವನ ಪ್ರೀತಿಯೇ ಅಂಥದ್ದು. ಸ್ನೇಹ, ಗಾಢವಾದ ಆತ್ಮೀಯತೆ, ಶಾಂತಿ, ನೆಮ್ಮದಿಗೆ ಮತ್ತೊಂದು ಹೆಸರು ಮೈಸೂರು. ಅಷ್ಟೇ ಚೆಂದದ ವಾತಾವರಣ, ಅಂದದ ಉದ್ಯಾನಗಳಿಂದ ಎಲ್ಲರ ಮನದಲ್ಲಿ ಸದಾ ಹಸಿರಾಗಿ ಉಳಿದುಬಿಡುತ್ತವೆ.

'ಮೈಸೂರು ದಸರಾ ಎಷ್ಟೊಂದು ಸುಂದರ...' ಎಂಬ ಗೀತೆಯು ಕಿವಿ ಹೊಕ್ಕಿದಾಗ ಮೈಸೂರಿನ ಚಿತ್ರಣ ಥಟ್ಟನೇ ಎದುರು ಬಂದು ನಿಲ್ಲುತ್ತದೆ. ನೆನಪುಗಳ ಮೆರವಣಿಗೆ ನಡೆಯುತ್ತದೆ. ದಸರೆಯ